ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.: 820/2022</u>

..................................................................

CW 04
PW 05

| | | |
|---|---|---|
| ಹೆಸರು | : | ಸುರೇಶ ಗೌಡಾ |
| ತಂದೆಯ ಹೆಸರು | : | ಯಲ್ಲಾರಿ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಮುಖ್ಯ ಪೇದೆ, ಕಾರವಾರ ಶಹರ ಪೊಲೀಸ ಠಾಣೆ, |
| ವಾಸಸ್ಥಳ | : | ಕಾರವಾರ. |

ದಿನಾಂಕ 20-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>**: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 30-07-2018 ರಿಂದ ದಿನಾಂಕ 30-06-2025 ರ ವರೆಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09-05-2022 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ನನಗೆ ಮತ್ತು ಚಾಸಾ 5 ರಿಂದ 7 ರವರಿಗೆ ಕರೆದು ಕಳಾಸಾಪುರ ಗ್ರಾಮದಲ್ಲಿ ಜೀವಪ್ಪ ಜಾವಳೇಕರ ಎಂಬ ವ್ಯಕ್ತಿ ಗ್ರಾಮದ ಅಂಗನವಾಡಿಯ ಹತ್ತಿರ ಸಾರ್ವಜನಿಕ ಹತ್ತಿರ ಸರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಕೊಟ್ಟರು. ಪಂಚರಿಗೂ ಮಾಹಿತಿ ನೀಡಿದರು. ಚಾಸಾ 1, ನಾನು, ಚಾಸಾ 5 ರಿಂದ 7 ರವರು ಮತ್ತು ಪಂಚರು ಸರ್ಕಾರಿ ಜೀಪಿನಲ್ಲಿ ದಾವಿ ಸಲಕರಣೆಗಳೊಂದಿಗೆ ಘಟನಾ ಜಾಗಕ್ಕೆ 04-25 ಘಟನಾ ಜಾಗವನ್ನು ತಲುಪಿ, ಅಲ್ಲಿ ನಾವು ನೋಡುತ್ತಿದ್ದಾಗ ಒಬ್ಬ ವ್ಯಕ್ತಿ ರಟ್ಟಿನ ಡಬ್ಬಿಯಲ್ಲಿ ಏನೋ ಇಟ್ಟುಕೊಂಡು ಆತನ ಎದುರಲ್ಲಿ ಏನು ಕುಡಿಯುತ್ತಿದ್ದು ಕಂಡು ಬಂದಿತು. ಸರಾಯಿ ಕುಡಿಯುತ್ತಿದ್ದಾರೆ ಎಂದು ಖಾತ್ರಿ ಪಡಿಸಿಕೊಂಡು 04-30 ಕ್ಕೆ ಪಂಚರ ಸಮಕ್ಷಮದಲ್ಲಿ ದಾಳಿ ಮಾಡಿದೆವು ಮತ್ತು ಚಾಸಾ 1 ರವರು ಆರೋಪಿಯನ್ನು ಹಿಡಿದುಕೊಂಡರು, ಅಲ್ಲಿದ್ದ ಇಬ್ಬರು ಕುಡಿಯುತ್ತಿರುವ ವ್ಯಕ್ತಿಗಳು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಓಡಿ ಹೋದರು. ಆರೋಪಿಯನ್ನು ಚಾಸಾ 1 ರವರು ವಿಚಾರಣೆ ಮಾಡಿದಾಗ ಆತನು ತನ್ನ ಹೆಸರನ್ನು ಜೀವಪ್ಪ ಜಾವಳೇಕರ ಎಂದು ಹೇಳಿದ. ಆತನ ಬಳಿ ಇದ್ದ ಬಾಕ್ಸ್ ಅನ್ನು ಪರಿಶೀಲನೆ ಮಾಡಲಾಗಿ 90 ಎಮ್ ಎಲ್ ಓರಿಜಿನಲ್ ಚಾಯ್ಸ್ 4 ಪ್ಯಾಕೇಟ್

ಗಳು, 90 ಎಮ್ ಎಲ್ ಮ್ಯಾಕ್ ಕ್ವೇನ್ ಟಿಷ್ ಕಂಪನಿಯ ಸರಾಯಿ 5 ಪ್ಯಾಕೇಟ್ ಸಿಕ್ಕವು, ಒಂದು ಪ್ಲಾಸ್ಟಿಕ್ ಬಾಟಲ್, ಎರಡು ಖಾಲಿ ಲೋಟಗಳು, ನಾಲ್ಕು ಖಾಲಿ ಒರಿಜಿನಲ್ ಚಾಯ್ಸು ಪ್ಯಾಕೇಟ್ ಗಳು, ರಟ್ಟಿನ ಬಾಕ್ಸ್ ಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿ ಅವುಗಳನ್ನು ತುಂಬಿದ ಪ್ಯಾಕೇಟ್ ಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಪಿ ಎಸ್ ಐ ರವರ ಅರಗಿನ ಸೀಲ್ ಹಾಕಿದೆವು. ನಂತರ ಜಪ್ತುಪಡಿಸಿಕೊಂಡ ವಸ್ತುಗಳನ್ನು ಮತ್ತು ಆರೋಪಿಯನ್ನು ಠಾಣೆಗೆ ಕರೆತಂದೆವು. ಆರೋಪಿಯ ಹತ್ತಿರ ಸಾರಾಯಿ ಮಾರಾಟ ಮಾಡಲು ಯಾವುದೇ ಪಾಸ್ ಅಥವಾ ಪರವಾನಿಗೆ ಪಡೆದಿಲ್ಲ ಎಂದು ಹೇಳಿದ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈಗ ನ್ಯಾಯಾಲಯದಲ್ಲಿ ಇರುವುದಿಲ್ಲ. ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಓರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೇಟ್ ಗಳನ್ನು ಮು.ಮಾ. 1 ಎಂದು, 90 ಎಮ್ ಎಲ್ ಮ್ಯಾಕ್ ಕ್ವೇನ್ ಟಿಷ್ ಕಂಪನಿಯ ಸರಾಯಿ 5 ಪ್ಯಾಕೇಟ್ ಗಳನ್ನು ಒಟ್ಟಾರೆಯಾಗಿ ಮು.ಮಾ. 2 ಎಂದು, ಎರಡು ಪ್ಲಾಸ್ಟಿಕ್ ಲೋಟಗಳನ್ನು ಮು.ಮಾ. 3 ಎಂದು, ಒಂದು ಪ್ಲಾಸ್ಟಿಕ್ ಬಾಟಲಿಯನ್ನು ಮು.ಮಾ. 4 ಎಂದು, ನಾಲ್ಕು ಖಾಲಿ ಓರಿಜಿನಲ್ ಚಾಯ್ಸು ಪ್ಯಾಕೇಟ್ ಗಳನ್ನು ಮು.ಮಾ. 5 ಎಂದು, ಒಂದು ರಟ್ಟಿನ ಡಬ್ಬಿಯನ್ನು ಮು. ಮಾ. 6 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ** ಆರೋಪಿಯ ಪರ ಶ್ರೀಮತಿ ಆರ್ ಎಮ್ ಸಿ ವಕೀಲರಿಂದ.

ಚಾಸಾ 1 ರವರು ನಮ್ಮ ಮೇಲಾಧಿಕಾರಿ ಎಂದರೆ ಸರಿ. ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಅನುಕೂಲ ವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಾಬಾದಿಂದ ಯಾವುದೇ ಮು.ವ್ರೂ.ಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ. ಹಳಿಯಾಳ